3. ಪ್ರಶ್ನೋತ್ತರಗಳು

(ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು)

ವಿಷಯ:- ರೇಷ್ಮೆ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿ.

16(258)

ಶ್ರೀ ಸಿ. ಚನ್ನಿಗಪ್ಪ (ಕೊರಟಗೆರೆ):- ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ರೇಷ್ಮೆ ಇಲಾಖೆಯಲ್ಲಿ 1993ನೇ ಇಸವಿಯಲ್ಲಿ ರೇಷ್ಮೆ ಪ್ರದರ್ಶಕರು, ರೇಷ್ಮೆ ನಿರೀಕ್ಷಕರ ಹುದ್ದೆಗಳನ್ನು ತುಂಬಲು ಅರ್ಜಿಗಳನ್ನು ಕರೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ನೇಮಕಾತಿ ಪಟ್ಟಿಯನ್ನು ಪ್ರಕಟಿಸಿದ್ದರೂ ಸಹ ಇದುವರೆವಿಗೂ ಅನುಷ್ಠಾನಗೊಳಿಸಿಲ್ಲದಿರುವುದು ನಿಜವೇ?

ಇ) ಹಾಗಿದ್ದಲ್ಲಿ ಸದರಿ ನೇಮಕವನ್ನು ಆದೇಶವನ್ನು ಯಾವಾಗ ಹೊರಡಿಸಲಾಗುವುದು?

ಶ್ರೀ ಎಂ. ವರದೇಗೌಡ (ರೇಷ್ಮೆ ರಾಜ್ಯ ಸಚಿವರು):-

ಅ) ಹೌದು.

ಆ) ಹೌದು.

ಇ) ನೇಮಕಾತಿ ಆದೇಶ ಹೊರಡಿಸಿರುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಸನ್ಮಾನ್ಯ ಮಂತ್ರಿಗಳು ಈ ವಿಷಯವಾಗಿ 18-7-96 ರಂದು ವಿಧಾನ ಸಭೆಯಲ್ಲಿ ಮಾನ್ಯ ಬಣಕಾರ್ ಅವರ ಪ್ರಶ್ನೆಗೆ ರೇಷ್ಮೆ ಇಲಾಖೆಯಲ್ಲಿ ಖಾಲಿ ಇರತಕ್ಕ ರೇಷ್ಮೆ ಪ್ರದರ್ಶಕರು ಮತ್ತು ರೇಷ್ಮೆ ನಿರೀಕ್ಷಕರ ಖಾಲಿ ಹುದ್ದೆಗಳನ್ನು ಆಗಸ್ಟ್ ಮಾಹೆಯ ಅಂತ್ಯದೊಳಗೆ ಭರ್ತಿ ಮಾಡುವುದಾಗಿ ಈ ಸದನದಲ್ಲಿ ಆಶ್ವಾಸನೆ ಕೊಟ್ಟಿದ್ದರು. ಈ ಆಶ್ವಾಸನೆ ಕೊಟ್ಟು, ಇಷ್ಟು ಕಾಲ ವಿಳಂಬವಾಗುವುದಕ್ಕೆ ಕಾರಣ ಏನು? ಒಂದು ಕಟ್ ಆಫ್ ಡೇಟ್ ದಯಮಾಡಿ ಹೇಳಬೇಕು. ಏಕೆಂದರೆ ನಾವು ರೇಷ್ಮೆ ಉತ್ಪಾದನೆಯಲ್ಲಿ ಪ್ರಪಂಚಕ್ಕೆ ಎರಡನೆಯವರು. ಎರಡನೆಯ ಉತ್ಪಾದಕರಾಗಿ, ಇದನ್ನು ಹೆಚ್ಚು ಅಭಿವೃದ್ಧಿ ಮಾಡುವ ನಿಟ್ಟಿನಲ್ಲಿ ಕೆಲಸ ಮಾಡಬೇಕಾಗುತ್ತದೆ. ಅದರಲ್ಲಿಯೂ ಮಳೆ ಆಧಾರಿತ ಪ್ರದೇಶಕ್ಕೆ ಹೆಚ್ಚು ಅವಶ್ಯಕತೆ ಇರುವುದರಿಂದ, ಈ ಪ್ರದರ್ಶಕರು ಮತ್ತು ನಿರೀಕ್ಷಕರನ್ನು ತೆಗೆದುಕೊಳ್ಳುವುದಕ್ಕೆ ಏಕೆ ಕಾಲ ವಿಳಂಬವಾಯಿತು ಎಂಬುದನ್ನು ತಾವು ದಯವಿಟ್ಟು ಹೇಳಬೇಕು.

ಶ್ರೀ ಎಂ. ವರದೇಗೌಡ:- ಮಾನ್ಯ ಅಧ್ಯಕ್ಷರೇ, ಆರ್ಥಿಕ ಇಲಾಖೆಗೆ ಆ ಪಟ್ಟಿಯನ್ನು ಕಳುಹಿಸಿದ್ದೇವೆ. ಅಲ್ಲಿಂದ ಬಂದ ತಕ್ಷಣ ಜರೂರಾಗಿ ಅವರನ್ನು ಭರ್ತಿ ಮಾಡುತ್ತೇವೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಒಂದು ಕಾಲ ನಿಗದಿ ಮಾಡಬೇಕು. ಈಗಾಗಲೇ ಆಗಸ್ಟ್ ತಿಂಗಳು ಎಂದು ಹೇಳಿದ್ದೀರಿ. ಎಫ್.ಡಿ.ಯವರಿಂದ ಕ್ಲಿಯರೆನ್ಸ್ ಆಗಬೇಕೆಂದರೆ, 3-4 ವರ್ಷಗಳಾದ ಮೇಲೆ ಕ್ಲಿಯರೆನ್ಸ್ ಸಿಗುತ್ತದೆ. ದಯಮಾಡಿ, ಸದನದಲ್ಲಿ ಕಾಲಾವಕಾಶದ ಬಗ್ಗೆ ಆಶ್ವಾಸನೆ ಕೊಡಬೇಕು.

ಶ್ರೀ ಎಂ. ವರದೇಗೌಡ:- ವಿಶ್ವಬ್ಯಾಂಕ್ ನೆರವಿನಲ್ಲಿ 1993ರಲ್ಲಿ ಆದೇಶ ಹೊರಡಿಸಲಾಗಿತ್ತು. ವಿಶ್ವಬ್ಯಾಂಕ್ ನೆರವು ಡಿಸೆಂಬರ್‌ಗೆ ಅಂತ್ಯಗೊಂಡ ದೆಸೆಯಿಂದ, ಇವತ್ತು ರಾಜ್ಯ ಸರ್ಕಾರ ಹಣವನ್ನು ಭರಿಸಬೇಕಾಗಿದೆ. ಅದಕ್ಕೆ ಆರ್ಥಿಕ ಇಲಾಖೆಗೆ ಪಟ್ಟಿಯನ್ನು ಕಳುಹಿಸಿಕೊಟ್ಟಿದ್ದೇವೆ. ಅಲ್ಲಿಂದ ಬಂದತಕ್ಷಣ ಜರೂರಾಗಿ ಕ್ರಮ ಕೈಗೊಳ್ಳುತ್ತೇವೆ.

ಅಧ್ಯಕ್ಷರು:- ಅವರ ಕಷ್ಟ ಏನೆಂದರೆ, ವಿಶ್ವಬ್ಯಾಂಕ್ ನೆರವಿನಿಂದ ಮಾಡಬೇಕೆಂದು ಆಲೋಚನೆ ಮಾಡಿದ್ದರು. ಅದು ಈಗ ಟರ್ಮಿನೇಟ್ ಆಗಿದೆ. ಅದಕ್ಕಾಗಿ ರಾಜ್ಯ ಸರ್ಕಾರವೇ ಬೇರ್ ಮಾಡಬೇಕಾಗುತ್ತದೆ. ಆದ್ದರಿಂದ ಎಫ್.ಡಿ.ಯವರೂ ಸ್ವಲ್ಪ ಹಿಂದುಮುಂದು ನೋಡುತ್ತಿದ್ದಾರೆ. ಆದಷ್ಟು ಬೇಗ ಮಾಡಿಸುತ್ತೇವೆಂದು ಹೇಳುತ್ತಾ ಇದ್ದಾರೆ.

ಶ್ರೀ ಎಂ. ವರದೇಗೌಡ:- ಆದಷ್ಟು ಬೇಗ ಮಾಡಿಕೊಡುತ್ತೇವೆ.

ಒಬ್ಬ ಸದಸ್ಯರು:- ಸಭಾಧ್ಯಕ್ಷರೇ, ನಮ್ಮ ಮೈಸೂರು ಬಿತ್ತನೆ ವಲಯ ಇದೆ. ನಮ್ಮ ಪ್ರದೇಶದಲ್ಲಿ ಸೂಪರ್‌ನ್ಯೂಮರರಿ ಪೋಸ್ಟ್ ಕೆಲವನ್ನು ಬೇರೆ ಇಲಾಖೆಗೆ ಮತ್ತು ರೇಷ್ಮೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದವರನ್ನು, ಎಲೇಜ್ ಅಕೌಂಟೆಂಟ್ ಆಗಿ ವರ್ಗಾವಣೆ ಮಾಡಿದ್ದಾರೆ. ಆದುದರಿಂದ, ದಯಮಾಡಿ ತಮ್ಮ ಮೂಲಕ ರೇಷ್ಮೆ ಸಚಿವರಲ್ಲಿ ಮನವಿ ಮಾಡಿಕೊಳ್ಳುವುದು ಇಷ್ಟೆ. ಬಿತ್ತನೆ ವಲಯದಲ್ಲಿ ಖಾಲಿ ಹುದ್ದೆಗಳು ಇಲ್ಲದ ಹಾಗೆ ನೋಡಿಕೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇವೆ.

MR. SPEAKER:- That is altogether different subject ಇದಕ್ಕೆ ಸಂಬಂಧಪಡುವುದಿಲ್ಲ.

ಶ್ರೀ ಆಯನೂರು ಮಂಜುನಾಥ್:- ಬಹಳಷ್ಟು ಪ್ರಶ್ನೆಗಳಿಗೆ ಮಂತ್ರಿಗಳು ಸದನದಲ್ಲಿ ಉತ್ತರವನ್ನು ಕೊಟ್ಟಿರುತ್ತಾರೆ. ಆದರೆ, ವರ್ಷವಾದರೂ ಕೂಡ ಜಾರಿಯಾಗುವುದಿಲ್ಲ. ಅದೇ ರೀತಿ ಮಾನ್ಯ ವರದೇಗೌಡರೂ ಕೂಡ ಇದೇ ಸದನದಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಮತ್ತೆ ಈಗ ಡಿಸೆಂಬರ್, ಜನವರಿ ಎಂದು ಉತ್ತರವನ್ನು ಕೊಡುತ್ತಾ ಇದ್ದರೆ, ಸದನದಲ್ಲಿ ಬಂದಂಥ ಉತ್ತರಕ್ಕೆ ಯಾವುದೇ ತೂಕ ಉಳಿಯುವುದಿಲ್ಲ. ಅದಕ್ಕಾಗಿ ಇದರ ಬಗ್ಗೆ ಅವರ ಶ್ರಮ ಏನು, ಅವರ ಪ್ರಯತ್ನ ಏನು ಎನ್ನುವುದನ್ನು ದಯಮಾಡಿ ತಿಳಿಸಬೇಕು.

MR. SPEAKER:- It varies. ಒಂದೊಂದು ಸಂದರ್ಭದಲ್ಲಿ ಒಂದೊಂದು ರೀತಿಯ ಸಮಸ್ಯೆ ಇರುತ್ತದೆ. ಮಂತ್ರಿಗಳು ಹೇಳಿದ ಮೇಲೆ ಏನಾಗುತ್ತದೆ. ಹೊಸದಾಗಿ ಆರ್ಥಿಕ ಹೊರೆ ಬೀಳುವುದರಿಂದ, ಸ್ವಲ್ಪ ಆಲೋಚನೆ ಮಾಡಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಬೇರೆ

ವಿಚಾರದಲ್ಲಿ, ಅನೇಕ ಸಲ ಇಷ್ಟು ದಿವಸ ಎಂದು ನಾನೇ ನಿಗದಿ ಮಾಡುತ್ತೇನೆ. ನಿಮ್ಮ ಭಾವನೆ ನನಗೂ ಅರ್ಥವಾಯಿತು. ನಾನು ಅನಂತರ, ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಆಯುಕ್ತರ ಜೊತೆ ಮಾತನಾಡುತ್ತೇನೆ.

ವಿಷಯ:- ಮಂಗಳೂರು ಮಹಾನಗರ ಪಾಲಿಕೆಯ ಚುನಾವಣೆ.

17(222)

ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ):- ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಮಂಗಳೂರು ಮಹಾನಗರಪಾಲಿಕೆಗೆ ಚುನಾವಣೆಯನ್ನು ಯಾವಾಗ ನಡೆಸಲಾಗುವುದು;

ಆ) ಚುನಾಯಿತ ನಗರಪಾಲಿಕೆ ಅಸ್ತಿತ್ವದಲ್ಲಿ ಇಲ್ಲದೇ ಇರುವುದರಿಂದ ಕುಡಿಯುವ ನೀರು, ರಸ್ತೆ, ಒಳಚರಂಡಿ ಮುಂತಾದ ಕನಿಷ್ಟ ಸೌಲಭ್ಯಗಳಿಂದ ಸಾರ್ವಜನಿಕರು ವಂಚಿತರಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಮಿರಾಜುದ್ದೀನ ಎಸ್. ಪಾಟೀಲ್ (ಪೌರಾಡಳಿತ ರಾಜ್ಯ ಸಚಿವರು):-

ಅ) ಆದಷ್ಟು ಶೀಘ್ರವಾಗಿ.

ಆ) ಇಲ್ಲ.

ಶ್ರೀ ಕೆ. ಜಯರಾಮಶೆಟ್ಟಿ:- ಸನ್ಮಾನ್ಯ ಅಧ್ಯಕ್ಷರೇ, ಮಂಗಳೂರು ಮಹಾನಗರ ಪಾಲಿಕೆಗೆ ಚುನಾವಣೆಯನ್ನು ಯಾವಾಗ ನಡೆಸುತ್ತೀರಿ ಎಂದು ಕೇಳಿದ್ದಕ್ಕೆ ಮಂತ್ರಿಗಳು ಉತ್ತರವನ್ನು ಕೊಟ್ಟು, ಅತಿ ಶೀಘ್ರವಾಗಿ ಎಂದು ಹೇಳಿದ್ದಾರೆ. ಮಂಗಳೂರು ಮಹಾನಗರ ಪಾಲಿಕೆಗೆ ಈಗಾಗಲೇ ಮೂರು ಸಲ ದಿನವನ್ನು ನಿಶ್ಚಯ ಮಾಡಿಕೊಂಡಿದ್ದರು. ಈ ಸರ್ಕಾರಕ್ಕೆ ಮಳೆಗಾಲ ಯಾವಾಗ, ಚಳಿಗಾಲ ಯಾವಾಗ, ಬೇಸಿಗೆ ಕಾಲ ಯಾವಾಗ ಎಂದು ಗೊತ್ತಾಗುತ್ತ ಇಲ್ಲ. ಕಳೆದ ಸಲ ಜೂನ್‌ನಲ್ಲಿ ನಾಮಿನೇಷನ್ಸ್ ತೆಗೆದುಕೊಂಡಿದ್ದರು. ಕಡೆಗೆ ಮಳೆಗಾಲ ಎಂದು, ಅದನ್ನು ಮುಂದುವರಿಸಿದರು. ಈಗ ಪುನಃ ಶೀಘ್ರವಾಗಿ ಎಂದು ಹೇಳುತ್ತಿದ್ದಾರೆ. ಯಾವ ತಾರೀಖಿಗೆ ಚುನಾವಣೆಯನ್ನು ನಡೆಸುತ್ತಾ ಇದ್ದೀರಿ ಎಂಬ ಬಗ್ಗೆ ತಾವು ನನಗೆ ನಿರ್ದಿಷ್ಟವಾಗಿ ಉತ್ತರವನ್ನು ಕೊಡಬೆಕು. ಶ್ರೀಘ್ರ ಎಂದು ಹೇಳಿದರೆ ಹೇಗೆ? ಮತ್ತೆ ಮಂಗಳೂರು ಮಹಾನಗರ ಪಾಲಿಕೆಯಲ್ಲಿ, ಹೊಸದಾಗಿ ಏನು ವ್ಯತ್ಯಾಸ ಮಾಡಿಕೊಂಡಿದ್ದೀರಿ. ಮುಂಚೆ ಅಲ್ಲಿ 65 ಡಿವಿಜನ್ ಇತ್ತು, ಯಾವುದನ್ನು ಬಿಟ್ಟಿದ್ದೀರಿ, ಯಾವುದನ್ನು ತೆಗೆದುಕೊಂಡಿದ್ದೀರಿ, ಯಾವ ಯಾವ ಕ್ಷೇತ್ರಗಳನ್ನು ಹೆಚ್ಚುವರಿಯಾಗಿ ತೆಗೆದುಕೊಂಡಿದ್ದೀರಿ, ಬದಲಾವಣೆ ಮಾಡಿಕೊಳ್ಳುತ್ತಾ ಇದ್ದೀರಿ. ಯಾವ ರೀತಿ ರೂಪರೇಖೆ ಮಾಡಿದ್ದೀರಿ ಎಂಬುದನ್ನು ನಮಗೆ ತಿಳಿಸಬೇಕೆಂದು ವಿನಂತಿ ಮಾಡುತ್ತೇನೆ.

ಅಧ್ಯಕ್ಷರು:- ನೀವು ದಕ್ಷಿಣ ಕನ್ನಡ ಜಿಲ್ಲೆಯವರು, ಅವರು ಬೀದರ್‌ನವರು. ನೀವು ಸ್ವಲ್ಪ ನಿಧಾನಕ್ಕೆ ಮಾತನಾಡಿದರು, ನಿಮ್ಮ ಕನ್ನಡ ಅವರಿಗೆ ಅರ್ಥವಾಗುತ್ತದೆ. ಇಲ್ಲದೇಹೋದರೆ, ನಾನು ತರ್ಜುಮೆ ಮಾಡಬೇಕಾಗುತ್ತದೆ.